ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ
ಸಿ.ಸಿ. ನಂ. 455/2025

| | | | |
|---|---|---|---|
| ಹೆಸರು | : | ಲೋಕೇಶ್.ಬಿ.ಎಸ್ | ಪಿಡಬ್ಲ್ಯೂ-1 |
| ಗಂಡನ ಹೆಸರು | : | ಪೌತಿ ಬಾಲಪ್ಪ.ಕೆ | ಸಿಡಬ್ಲ್ಯೂ-1 |
| ವಯಸ್ಸು | : | 49 ವರ್ಷ | |
| ವೃತ್ತಿ | : | ಅಬಕಾರಿ ನಿರೀಕ್ಷರು | |
| ವಾಸ ಸ್ಥಳ | : | ಮೈಸೂರು | |

ದಿಃ06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.ಸಿ

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

ದಿನಾಂಕ ಫೆಬ್ರುವರಿ 2022 ರಿಂದ ಸೆಪ್ಟೆಂಬರ್ 2025ರ ತನಕ ಅಬಕಾರಿ ನಿರೀಕ್ಷಕನಾಗಿ ಸೋಮವಾರಪೇಟೆ ವಲಯ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ದಿನಾಂಕ 06.12.2024 ರಂದು ಸಮಯ ಸಂಜೆ 6.00 ಗಂಟೆ ಸಮಯದಲ್ಲಿ ನಾನು ಇಲಾಖಾ ಸಿಬ್ಬಂದಿಗಳಾದ ಚಾಸಾ 2 ಮತ್ತು 3 ರೊಂದಿಗೆ ಆಲೂರು ಸಿದ್ದಾಪುರದಲ್ಲಿರವ ಎಚ್ ಇ ತಮ್ಮಯ್ಯರವರಿಗೆ ಸೇರಿದ ಸಿಎಲ್ 7 ಸನ್ನದ್ದನ್ನು ತಪಾಸಣೆ ನಡೆಸುವ ವೇಳಯಲ್ಲಿ ವ್ಯವಿಕ್ತಿಯೊಬ್ಬರು ಚಾಸಾ 3 ರವರನ್ನು ಹೊರಗೆ ಕರೆದು ಕಣಿವೆ ಬಸವನಹಳ್ಳಿ ಗ್ರಾಮದ ನಿವಾಸಿಯಾದ ಉನ್ನಿಕೃಷ್ಣ ಎಂಬಾತನು ಬೆಲ್ಲದ ಪುಳಗಂಜಿಯನ್ನು ತಯಾರಿಸಿ ಅದರಿಂದ ಕಳ್ಳಬಟ್ಟಿ ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿಯನ್ನು ನೀಡಿದ ಮೇರೆಗೆ ಸದರಿ ಮಾಹಿತಿಯನ್ನು ಚಾಸಾ 3 ರವರು ಲಿಖಿತವಾಗಿ ದೂರನ್ನು ನನಗೆ ನೀಡಿದ ಮೇರೆಗೆ ಕ್ರಮ ಕೈಗೊಳ್ಳಲು ವಾಹನ ಚಾಲಕನೊಂದಿಗೆ ಇಲಾಖಾ ವಾಹನದಲ್ಲಿ ಇಲಾಖಾ ಸಿಬಂದಿಗಳೊಂದಿಗೆ ಅಕ್ರಮ ಎಸಗುತ್ತಿರುವ ವ್ಯಕ್ತಿಯ ವಿಳಾಸವನ್ನು ಪತ್ತೆ ಹಚ್ಚಿ ಅವರ ಮನೆಯಿಂದ ಸುಮಾರು 100 ಮೀ ದೂರದಲ್ಲಿ ವಾಹನವನ್ನು ನಿಲ್ಲಿಸಿ ಪರಿಶೀಲಿಸಿದಾಗ ಒಂದೇ ಒಂದು ಮನೆ ಇರುವುದು ಕಂಡುಬರುತ್ತದೆ. ಆ ಮನೆಯ ಬಳಿ ಹೋಗಿ ನೋಡಿದಾಗ ಒಬ್ಬ ವ್ಯಕ್ತಿ ಇದ್ದು ನನ್ನ ಹ ೆಸರು ಅಪ್ಪಣ್ಣ ಎಂದು ತಿಳಿಸುತ್ತಾರೆ. ಅವರಿಗೆ ನಾವುಗಳು ಬಂದ ವಿಷಯವನ್ನ ತಿಳಿಸಿ ಪಂಚರಾಗಿ ಬರಬೇಕಾಗಿ ಕೇಳಿಕೊಂಡಾಗ ಸದರಿಯವರು ನಿರಾಕರಿಸಿರುತ್ತಾರೆ. ಅಕ್ಕಪಕ್ಕದಲ್ಲಿ ಯಾವುದೇ ಮನೆಗಳು ಹಾಗೂ ರಸ್ತೆಯಲ್ಲಿ ಯಾರ ಓಡಾಟವೂ ಕಂಡು ಬರದ ಕಾರಣ ಇಲಾಖಾ

ಸಿಬ್ಬಂದಿಗಳನ್ನು ಪಂಚರನ್ನಾಗಿ ಮಾಡಿಕೊಂಡು ಮಾನ್ಯ ಘನ ನ್ಯಾಯಾಲಯದಿಂದ ಶೋಧನಾ ಸಮಚ್ಚಿತ ವಾರೆಂಟನ್ನು ಪಡೆಯಲು ಸಮಾಯಾವಕಾಶ ಇಲ್ಲದ ಕಾರಣ ನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶೋಧನ ಸಮಚ್ಚಿತ ವಾರೆಂಟನ್ನು ತಯಾರಿಸಿ ಪಂಚರ ಸಹಿ ಪಡೆದು ಸದರಿ ಆರೋಪಿಯ ಮನೆಯ ಬಳಿ ಬಂದಾಗ ಒಬ್ಬ ಹುಡುಗ ನಿಂತಿರುವುದು ಕಂಡುಬಂದಿರುತ್ತದೆ. ಅವರಿಗೆ ನಾವುಗಳು ಬಂದ ವಿಷ್ಯ ತಿಳಿಸಿ ಶೋಧನೆ ನಡೆಸುವುದಾಗಿ ತಿಳಿಸಿ ಮನೆಯನ್ನು ಶೋಧನೆ ನಡೆಸಿ ನಂತರ ಅದರ ಪಕ್ಕದಲ್ಲಿರುವ ಕಾಫಿ ತೋಟವನ್ನು ಒಂದು ಬಂದಿಯಿಂದ ಶೋಧನೆ ನಡೆಸಿ ಮನೆಯ ಹಿಂಭಾಗದ ಹಾಗೂ ತೋಟದ ಮಧ್ಯಭಾಗದಿಂದ ಒಬ್ಬ ವ್ಯಕ್ತಿ ಟಾರ್ಚ್ ಬೆಳಕಿನ ಸಹಾಯದಿಂದ ವೇಗವಾಗಿ ಹೋಗುವುದು ಕಂಡುಬಂದಿರುತ್ತದೆ. ಆ ಸ್ಥಳದಲ್ಲಿ ಪರಿಶೀಲಿಸಿದಾಗ ಕಲ್ಲು ಬಂಡೆಗಳ ಮಧ್ಯೆ ಪರಿಕರಗಳು ಇರುವುದು ಕಂಡುಬರುತ್ತದೆ. ಓಡಿಹೋದ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿದಾಗ ತೋಟದ ಅಕ್ಕದಲ್ಲಿರುವ ಅರಣ್ಯ ಪ್ರದೇಶದಲ್ಲಿ ನಾಪತ್ತೆಯಾಗಿರುತ್ತಾರೆ. ನಂತರ ಪರಿಕರಗಳಿರುವ ಸ್ಥಳವನ್ನು ಪರಿಶೀಲಿಸಿದಾಗ ಒಂದು ಹೆಚ್ ಪಿ ಸಿಲಿಂಡರ್ ಅದರೊಂದಿಗೆ 1.30 ಮೀ ಪೈಪ್ ನೊಂದಿಗೆ ಜೋಡಿಸಿದ ಸಿಂಗಲ್ ಬರ್ನಲ್ ಮೇಲೆ 40 ಲೀ ಸಾಮರ್ಥ್ಯದ ಅಲ್ಯುಮಿನಿಯಂ ಪಾತ್ರೆ ಹಾಗೂ ಅದರಲ್ಲಿ ಸುಮಾರು 30 ಲೀ ನಷಲ್ಟು ಬೆಲ್ಲದ ಪುಳಗಂಜಿ ಕಂಡುಬಂದಿರುತ್ತದೆ. ಸಿಲಿಂಡರ್ ಪಕ್ಕದಲ್ಲಿ ೌಂದು 15 ಲೀ ಸಾಮರ್ಥ್ಯದ ಹಳದಿ ಬಣ್ಣದ ಖಾಲಿ ಬಿಂದಿಗೆ ಹಾಗೂ ಸಿಲಿಂಡರ್ ಹಾಗೂ ಸೌವ್ ಮಧ್ಯೆ 15 ಲೀ ಸಾಮರ್ಥ್ಯ ದ ಅಲ್ಯುಮಿನಿಯಂ ಪಾತ್ರೆ ಇದ್ದು ಅದರಲ್ಲಿ ಬಿಸಿ ನೀರು ಇರುವುದು ಕಂಡುಬಂದಿರುತ್ತದೆ. ಅದರ ಬದಿಯಲ್ಲಿ ಸುಮಾರು 20 ಲೀ ಸಾಮರ್ಥ್ಯದ ಹಳದಿ ಬಣ್ಣದ ಪ್ಲಾಸ್ಟಿಕ್ ಬಿಂದಿಗೆ ಇದ್ದು ಅದರಲ್ಲಿ ಸುಮಾರು 10 ಲೀಟರ್ ನಷಲ್ಟು ಬಿಸಿ ಕಳ್ಳಬಟ್ಟಿ ಸಾರಾಯಿ ಕಂಡುಬಂದಿರುತ್ತದೆ. ಸಿಲಿಂಡರ್ ಪಕ್ಕದಲ್ಲಿ ಸುಮಾರು 10 ಲಿ ಸಾಮರ್ಥ್ಯದ  ಬಿಳಿ ಬಣ್ಣದ ಪೇಂಟ್ ಬಕೇಟ್ ನಲ್ಲಿ ಸುಮಾರು 5 ಲೀ ಬೆಲ್ಲದ ಪುಳಗಂಜಿ ಕಂಡುಬಂದಿರುತ್ತದೆ. ಅದರ ಬದಿಯಲಿ ್ಲ ಒಂದು ಅಲ್ಯುಮಿನಿಯಂ ಸೌಟು ತಿಳಿಕೆಂಪು ಬಣ್ಣದ ಮಗ್ , ಹಾಗೂ 2 ಲೀ ಸಾಮರ್ಥ್ಯದ  ಅಲ್ಯುಮಿನಿಯಂ ಪಾತ್ರೆ ಕಂಡುಬಂದಿರುತ್ತದೆ. 40 ಲೀ ಸಾಮರ್ಥ್ಯದ  ಅಲ್ಯುಮಿನಿಯಂ ಪಾತ್ರೆಯಿಂದ ಹಾಗೂ 10 ಲೀ ಬಕೆಟ್ ನಿಂದ 180 ಮಿಲಿ ಸಾಮರ್ಥ್ಯದ  ಗಾಜಿನ ಬಾಟಲಿಯಲ್ಲಿ ಬೆಲ್ಲದ ಪುಳಗಂಜಿ ಹಾಗೂ 20 ಲೀ ಸಾಮರ್ಥ್ಯದ  ಬಿಂದಿಗೆಯಿಂದ 180 ಮಿಲಿ ಲೀ ಸಾಮರ್ಥ್ಯದ  ಗಾಜಿನ ಬಾಟಲಿಯಲ್ಲಿ ಕಳ್ಳಬಟ್ಟಿ ಸಾರಾಂಿು ಯನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು ಮುಚ್ಚಳ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಬಿಗಿದು ಇಲಾಖಾ ಸೀಲು ಮಾಡಲಾಯಿುತು. ಎಲ್ಲಾ ಮುದ್ದೆಮಾಲುಗಳನ್ನು ವಶಕ್ಕ ಪಡೆದು ಸದರಿಯವರ ಮನೆಯ ಮುಂದೆ ಬಂದು ನನ್ನ ಐಪಾಡ್ ನಲ್ಲಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಲಾಯಿುತು. ಎಲ್ಲಾ ವಿವರಗಳನ್ನು ಮಾದರಿ

ಚೀಟಿಯಲ್ಲಿ ನಮೂದಿಸಿ ಮುದ್ದೆ ಮಾಲುಗಳನ್ನು ಅಂಟಿಸಲಾಯಿುತು. ಈ ಮಹಜರ್ ಕ್ರಮವನ್ನು ರಾತ್ರಿ 8.00-9.00 ರವರೆಗೆ ಮಾಡಲಾಯಿತು. ನಂತರ ಠಾಣೆಗೆ ಬಂದು ಎಲ್ಲಾ ದಾಖಲಾತಿಗಳನ್ನು ಹಾಗೂ ದಾಳಿ ಪ್ರಕ್ರಿಯೆಗಳನ್ನು ವೀಡಿಯೋದಲ್ಲಿ ಚಿತ್ರೀಕರಿಸಿ ಸಿಡಿ ಹಾಗೂ ಛಾಯಾಚಿತ್ರಗಳೊಂದಿಗೆ ಮಾನ್ಯ ಘನ ವನ್ಯಾಯಾಲಯಕ್ಕ ಸಲ್ಲಿಸಲಾಂಿುತು. ಮತ್ತು ಮುಂದಿನ ತನಿಖೆಗಾಗಿ ಚಾಸಾ 6 ರವರಿಗೆ ಕಡತವನ್ನು ವಹಿಸಿಕೊಟ್ಟಿರುತ್ತೇನೆ.

ದೂರನ್ನು ನಿಪಿ.1 , ಸಾಕ್ಷಿಯ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು, ಎಫ್ ಐಆರ್ ನಿಪಿ.2, ಶೋಧನಾ ಸಮಚ್ಚಿತ ಆಧಾರವನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ), ಮಹಜರನ್ನು ನಿಪಿ.4 ಮತ್ತು ಸಾಕ್ಷಿಯ ಸಹಿ ನಿಪಿ 4(ಎ), ಮಾದರಿ ಮೊಹರನ್ನು ನಿಪಿ.5, ಮತ್ತು ತನ್ನ ಸಹಿಯನ್ನು ನಿಪಿ 5(ಎ), ಫೋಟೋ ನಿಪಿ.6 ರಿಂದ 9 ಎಂದು, ಭಾರತ ಸಾಕ್ಷ್ಯ ಅಧಿನಿಯಮ ದೃಢೀಕರಣ ಪತ್ರ ನಿಪಿ.10, ಸಾಕ್ಷಿಯ ಸಹಿಯನ್ನು ನಿಪಿ.10(ಎ), ಸಿಡಿ ನಿಪಿ. 11 ಎಂದು ಗುರುತಿಸಲಾಯಿುತು. ಮಾದರಿಗಾಗಿ ತೆಗೆದ ಕಳ್ಳಬಟ್ಟಿ ಸಾರಾಯಿ 1 ಗಾಜಿನ ಬಾಟಲ್ ನ್ನು ಒಟ್ಟಾಗಿ ಎಂ.ಓ 1 ಎಂದು, 180 ಮಿಲಿಯ 2 ಗಾಜಿನ ಬಾಟಲ್ ನ್ ಬೆಲ್ಲದ ಪುಳಗಂಿಯನ್ನು ಎಂ.ಓ 2 ಎಂದು ಗುರುತಿಸಲಾಯಿತು, ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಶ್ರೀ. ಕೆ ಎಸ್ ಪಿ ವಕೀಲರಿಂದ:</u>

ನಾನು ಆ ದಿನ ಸಿಎಲ್ 7 ಸನ್ನದ್ದನ್ನು ಪರೀಕ್ಷಿಸಲು ಹೋಗಿರುತ್ತೇನೆ. ನಮ್ಮ ಕಚೇರಿಯಲ್ಲಿ ಚಲನಾ ವಲನಾ ಪುಸ್ತಕ ಇರುತ್ತದೆ. ನಾನು ಸನ್ನದ್ದ್ ಪರೀಕ್ಷಿಸಿದ ಬಾರ್ ನಿಂದ ಘಟನಾ ಸ್ಥಳ ಸುಮಾರು 5 ಕಿಮೀ ಅಂತರ ಇರುತ್ತದೆ. ಚಾಸಾ 3 ರವರು ನನಗೆ ದೂರನ್ನು ಬಾರ್ ನಲ್ಲಿ ನೀಡಿರುತ್ತಾರೆ. ದೂರನ್ನು ಸ್ವೀಕರಿಸಿರುವ ಬಗ್ಗೆ ಸೀಲ್ ಹಾಕಿರಲಿಲ್ಲ. ಸ್ಥ.,ಳದಲ್ಲೇ ಕ್ರೈಂ ನಂಬರ್ ನ್ನು ಆನ್ ಲೈನ್ ನಲ್ಲಿ ವೀಕ್ಷಿಸಿ ನೀಡಿರುತ್ತೇನೆ. ಸ್ಥಳದಲ್ಲಿ ಕ್ರೈಂ ನಂಬರ್ ನಮೂದು ಮಾಡಿರುವುದಿಲ್ಲ. ಮಹಜರ್ ನಲ್ಲಿ ಸಹ ಕ್ರೈಂ ನಂಬರ್ ನಮೂದು ಮಾಡಿರುವುದಿಲ್ಲ. ಬಾರ್ನಿಂದ ಆರೋಪಿ ಮನೆಗೆ ಹೋಗಬೇಕಾದರೆ ಸಾಕಷ್ಟು ಮನೆ ಇರುತ್ತದೆ ಎಂದರೆ ಸರಿ. ಸ್ವತಂತ್ರ ಸಾಕ್ಷಿದಾರರನ್ನು ಪಂಚರಾಗಿ ಮಾಡಿರುವುದಿಲ್ಲ. ಆರೋಪಿಯ ಮನೆಯಲ್ಲಿ ಆರೋಪಿ, ಮಗ ಮತ್ತು ಪತ್ನಿ ವಾಸವಾಗಿರುತ್ತಾರೆ. ವೀಡಿಯೋ ಚಿತ್ರೀಕರಣ ಮಾಡುವಾಗ ಆರೋಪಿಯ ಮಗನನ್ನು ಚಿತ್ರೀಕರಿಸಿರುವುದಿಲ್ಲ. ಮಹಜರ್ ಸಮಯದಲ್ಲಿ ಆರೋಪಿಯ ಮಗನ ಸಹಿ ಪಡೆದಿರುವುದಿಲ್ಲ. ಆರೋಪಿಯು ಅಕ್ರಮವಾಗಿ ಮಾರಾಟ ಮಾಡಿರುವ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಮತ್ತು ಖರೀದಿದಾರರ ಬಗ್ಗೆ ಸಹ ನಾನು ವಿಚಾರ ಮಾಡಿರುವುದಿಲ್ಲ. ನಿಪಿ 6 ಮತ್ತು 7 ರಲ್ಲಿ ಛಾಯಾಚಿತ್ರದಲ್ಲಿ ಕಾಣುವಂತಹ ಪಾತ್ರೆಯಲ್ಲಿ ಯಾವುದೇ ಪಂಚರ ಸಹಿ ಮಾಡಿರುವ ಚೀಟಿ ಅಂಟಿಸಿರುವುದಿಲ್ಲ. ನಿಪಿ 6 ಮತ್ತು 7 ರಲ್ಲಿ ಅಕ್ಕಾಂಕ್ಷ

ಮತ್ತು ರೇಖಾಂಶ ಇರುವಂತಹ ಸ್ಥಳವನ್ನು ಗುರುತು ಮಾಡಬಹುದು. ಕಳ್ಳಬಟ್ಟಿ ತಯಾರು ಮಾಡುವಾಗ ಅದರ ಪರಿಕರವಾದಂತಹ ಪೈಪ್ ಅಲ್ಲಿ ಇರುವುದಿಲ್ಲ ಎಂದರೆ ಸರಿ. ಎಲ್ಲಾ ಮುದ್ದ್ಮಾಲುಗಳನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಆ ಸ್ಥಳಕ್ಕೆ ಭೇಟಿ ನೀಡಿ ಮಹಜರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.ಹಾಗೂ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 3 ರವರ ವಿರುದ್ಧ. ಸುಳ್ಳು ದೂರನ್ನು ಸ್ವೀಕರಿಸಿ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ

ಸೋಮವಾರಪೇಟೆ